


### ಆಹಾರ ಸಂಸ್ಕೃತಿ

ಸುಧಾ, ಜುಲೈ 17 ಸಂಚಿಕೆಯ ಎಸ್. ತುಂಬೇಮನೆ ಅವರ ಮುಖಪುಟ ಲೇಖನ ಓದಿದ ಮೇಲೆ ದೇಶೀಯ, ವಿದೇಶೀಯ ಹಾಗೂ ಪ್ರಾದೇಶಿಕ ಆಹಾರಗಳು ಬೆಂಗಳೂರಿನ ಹೋಟೆಲ್‌ನಲ್ಲಿ ಲಭ್ಯವಾಗುತ್ತಿರುವುದು ತಿಳಿದು ಸಂತೋಷವಾಯಿತು.

– ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಬಿ.ಎಸ್. ರಮೇಶ್ ಬೆಳ್ಳಾವೆ, ವೈ.ಜಿ.ನರಸಿಂಹನ್, ಶಿವಮೊಗ್ಗ, ಮೊಳಕಾಲ್ಮುರು ಸುರೇಶ್, ಬಳ್ಳಾರಿ, ಆರ್. ಮಣಿ ಹಾಡ್ಯ, ಉದಯಗಿರಿ, ರಾಮಚಂದ್ರ ಎಂ.ಜಿ. ಮಂಡಗಳಲೆ

### ಬದಲಾದ ಆಹಾರ ಪದ್ಧತಿ

ನಗರ ಪ್ರದೇಶಗಳಲ್ಲಿ ಬದಲಾದ ಆಹಾರ ಸಂಸ್ಕೃತಿ ಬಗ್ಗೆ ಲೇಖನ ಬೆಳಕು ಚೆಲ್ಲಿದೆ. ಬೆಂಗಳೂರಿನಲ್ಲಿ ಮಲೆನಾಡಿನ ಆಹಾರ ಮನೆಗಳಲ್ಲೂ ಅಪರೂಪವಾಗಿವೆ. ರೊಟ್ಟಿ, ಕಡುಬು ಸ್ಥಾನವನ್ನು ನೂಡಲ್ಸ್, ಪಿಜ್ಜಾ, ಪಾವ್‌ಬಾಜಿ ಕಬಳಿಸಿಬಿಟ್ಟಿವೆ. ಇವುಗಳ ವೈವಿಧ್ಯತೆಗೆ ಮಾರುಹೋದ ಹಳ್ಳಿಗಳಲ್ಲಿಯೂ ಈಗೀಗ ಇವುಗಳು ಇಣುಕು ಹಾಕುತ್ತಿವೆ.

– ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಕಿರು ನಾಟಕ ಚೆನ್ನಾಗಿದೆ

ಎಳೆಯರ ಅಂಗಳ ವಿಭಾಗದಲ್ಲಿ 'ಮಾದರಿ ಗ್ರಾಮ' (ಶಿಲ್ಪಾ, ಬೆಂಗಳೂರು) ಮಕ್ಕಳ ಕಿರು ನಾಟಕ ತುಂಬ ಚೆನ್ನಾಗಿದೆ.

– ಮಹೇಶ್ ಸಣ್ಣಗಿರಿ, ಕೊಟ್ಟೂರು

### ಚಿತ್ರ ಚೆನ್ನಾಗಿದೆ

ಬಾಲಿವುಡ್ ಪುಟದಲ್ಲಿ ಸಲ್ಮಾನ್‌ಖಾನ್ ಜೊತೆ ನಿಂತ ಜಾಕ್ವೆಲಿನ್ ಚಿತ್ರ ಚೆನ್ನಾಗಿದೆ. ಶ್ರದ್ಧಾ ಕಪೂರ್ ಚಿತ್ರದೊಂದಿಗೆ ಇರುವ ಶೀರ್ಷಿಕೆ 'ಕಾಲಿಗಿಂತ ಬೂಟು ದೊಡ್ಡದು' ಪಕ್ಕದ ಪುಟದ ಜಾಹಿರಾತಿಗೆ ಹೇಳಿ ಮಾಡಿಸಿದಂತಿತ್ತು.

–ಗೀತಾ ಎಸ್.ಕೆ. ಹಾಸನ

### ಸಕಾಲಿಕ

ಅಂಕಿಗಳ ಮೀರಿದ ಬದುಕಿನ ಗಣಿತ 'ನಿಮ್ಮೊಡನೆ' ಲೇಖನ ಸಕಾಲಿಕವಾಗಿದೆ. ಇಂದಿನ ಯಾಂತ್ರಿಕ ಜಗತ್ತಿನಲ್ಲಿ ಹಾಸಿಗೆ ಇದ್ದಷ್ಟು ಕಾಲು ಚಾಚಲು ಬಹುಸಂಖ್ಯಾತರು ಸಿದ್ಧರಿಲ್ಲ. ಇತರರೊಡನೆ ಹೋಲಿಕೆ ಮಾಡಿಕೊಂಡು ಐಷಾರಾಮಿ ಜೀವನದ ಆಸೆಗೆ ಸಂಪಾದನೆಗೂ ಮೀರಿದ ಖರ್ಚು ಆಗುವುದರಿಂದ ಸಾಲ ಮಾಡಲು ಸಿದ್ಧರಾಗುತ್ತಾರೆ. ಬಡ್ಡಿ ವಿಪರೀತವಾಗಿ ಜೀವನ ದುರ್ಭರವಾಗುತ್ತದೆ.

–ಬಿ. ಚಂದ್ರೇಗೌಡ, ಬೆಂಗಳೂರು, ಪದ್ಮಾ ಕೃಷ್ಣಮೂರ್ತಿ, ತುಮಕೂರು, ಮಹಾವೀರ ಕಾಸರ, ಶಿವಮೊಗ್ಗ

### ಮುತ್ತಾಗಿ ಏಕೆ ಕಂಡಿದೆ?

'ಮಾತೇ ಮುತ್ತು' ಅಂಕಣದಲ್ಲಿ ಒಮ್ಮೊಮ್ಮೆ ಮುತ್ತಲ್ಲದ್ದನ್ನೆಲ್ಲ ಮುತ್ತೆಂದು ಬಿಂಬಿಸುವ ಪರಿಪಾಠ ಕಾಣುತ್ತಿದೆ. ನಮ್ಮ ಸಂಸ್ಕೃತಿ ಪರಂಪರೆಗಳನ್ನೆಲ್ಲ ಹೀಯಾಳಿಸುವ ದೇವನೂರು ಮಹಾದೇವರ ಮಾತುಗಳು ಮುತ್ತಾಗಿ ಏಕೆ ಕಂಡಿದೆ?

– ಗೌರಿಬಿದನೂರು ರಂಗಪ್ಪ

### ಕಲಾ ತಪಸ್ವಿ ಕಮಲೇಶ್

'ಕಲಾಲೋಕದ ಮೈಸೂರು ಮಲ್ಲಿಗೆ', ಮಹತಿ ಅವರ ಲೇಖನ ಸೊಗಸಾಗಿದೆ. ಕಲಾವಿದ ಕಮಲೇಶ್ ಅವರ ಸಾಧನೆ ಹಲವಾರು ರಂಗಗಳಲ್ಲಿ ಹರಡಿ ಘಮಘಮಿಸಿದೆ. ಪಾರಂಪರಿಕ ರೇಖಾ ಚಿತ್ರಗಳ ಗಾರುಡಿಗರಷ್ಟೇ ಅಲ್ಲದೆ ಗಾಯಕ, ಚಿತ್ರಕಲಾ ನಿರ್ದೇಶಕ, ನಟರಾಗಿ ಮರೆಯಲಾಗದ ಛಾಪನ್ನು ಕಲಾ ರಸಿಕರ ಹೃದಯದಲ್ಲಿ ಮೂಡಿಸಿ ಅಮರರಾಗಿದ್ದಾರೆ ಈ ಕಲಾ ತಪಸ್ವಿ.

–ಸರಸ್ವತಿ ಭೂಷಣ್, ನೆಲಮಂಗಲ, ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ, ಲಕ್ಷ್ಮೀನರಸಿಂಹ, ಚಾಮರಾಜನಗರ, ಮುಕುಂದ ಹೆರಕಲ್ಲ, ಗುಲ್ಬರ್ಗ, ಎ.ಕೆ. ಪಟ್ಟಾಭಿ, ಸುಂದರ್, ಬೆಂಗಳೂರು

### 'ಸುಧಾ'ದಿಂದಲೇ ತಿಳಿದದ್ದು

ಕಮಲೇಶ್ ಬಗೆಗಿನ ಲೇಖನ ಓದಿ ಕಣ್ತುಂಬಿ ಬಂತು. ಕಮಲೇಶ್ ನನ್ನ ಮಾನಸಿಕ ಗುರುಗಳಾಗಿದ್ದರು. ಅವರ ಬರಹ ಶೈಲಿಯನ್ನೇ ನನ್ನ ವ್ಯಂಗ್ಯಚಿತ್ರಗಳಿಗೆ ಬಳಸುತ್ತಾ ಬಂದವನು ನಾನು. ಅವರು ತೀರಿಕೊಂಡ ಸುದ್ದಿ ತಿಳಿದದ್ದು 'ಸುಧಾ'ದಿಂದಲೇ. ಕಲಾವಿದರ ಬದುಕೇ ದುರಂತ. ಅವರು ತೀರಿಕೊಂಡದ್ದು ಅನೇಕ ಪತ್ರಿಕೆಗಳಿಗೆ ದೊಡ್ಡ ಸುದ್ದಿಯಾಗುವುದೇ ಇಲ್ಲ. ಮೈಸೂರಿನೊಂದಿಗೆ 20 ವರ್ಷಗಳ ಒಡನಾಟವಿದ್ದರೂ ಜೀವನದಲ್ಲಿ ಒಮ್ಮೆಯಾದರೂ ಅವರನ್ನು ಕಾಣುವ ನನ್ನ ಹಂಬಲ, ಕನಸು ಈಡೇರಲೇ ಇಲ್ಲವಲ್ಲ ಎಂದು ವಿಷಾದವಾಗಿದೆ.

–ಏಕನಾಥ ಬೊಂಗಾಳೆ, ಕಮ್ಮಚ್ಚಿ,

### ಮಾಹಿತಿಪೂರ್ಣ ಲೇಖನ

ಆರೋಗ್ಯ ಲೇಖನ 'ಮಗುವಿಗೆ ಲಸಿಕೆ ಹಾಕಿಸಿದ್ದೀರಾ..' (ಡಾ. ವಿನಯ ಶ್ರೀನಿವಾಸ್) ಉಪಯುಕ್ತ ಲೇಖನವಾಗಿದ್ದು ಮಾಹಿತಿಪೂರ್ಣವಾಗಿದೆ. ಒಂದು ಲಸಿಕೆ ಎಷ್ಟೋ ಭಯಾನಕ ರೋಗಗಳನ್ನು ತಡೆಯುವ ಶಕ್ತಿ ಹೊಂದಿದೆ ಮತ್ತು ಯಾವ ಲಸಿಕೆ ಯಾವ ಔಷಧಿ ಮೂಲವನ್ನು ಹೊಂದಿದೆ ಎಂಬ ಬಗ್ಗೆ ಲೇಖನ ಮಾಹಿತಿ ನೀಡಿದೆ.

–ಅಶ್ವಿತಾ, ಉಜಿರೆ

### ಕಥೆ ಮನಮುಟ್ಟುವಂತಿತ್ತು

'ಮನದ ಕದ ತೆರೆದಾಗ', ಸುನಂದಾ ಹಾಲಭಾವಿ ಅವರ ಕಥೆ ಮನಮುಟ್ಟುವಂತಿತ್ತು.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ಕೊಹಿಮ, ಬಸರಕೋಡು, ಎಚ್. ಆನಂದಕುಮಾರ್, ಚಿತ್ರದುರ್ಗ

### ಸಂಗ್ರಾಹ್ಯ

ಹೆಲ್ತ್ ಪ್ಲಸ್ ಅಂಕಣದಲ್ಲಿ ಮೂಡಿಬರುತ್ತಿರುವ ಟಿಪ್ಸ್ ಸಂಗ್ರಾಹ್ಯ. ಯೌವ್ವನ ತುಂಬುವ ಜಾಲತಾಣವಂತೂ ಪೂರಕವಷ್ಟೆ ಅಲ್ಲದೆ ಪ್ರೇರಕವೂ ಆಗಿದೆ.

– ನೆ.ಲ.ರಾಂ, ಬೆಂಗಳೂರು

### ಕಾರುಗಳ ಶಿಸ್ತು

ವಂಡರ್‌ಪುಟ '10 ದಿನಗಳ ಟ್ರಾಫಿಕ್ ಜಾಮ್' ಚಿತ್ರವನ್ನು ನೋಡಿದಾಗ ಕಣ್ಣು ಸೆಳೆದದ್ದು ಟ್ರಾಫಿಕ್ ಜಾಮ್‌ನಲ್ಲಿ ಕಾರುಗಳು ನಿಂತ ಶಿಸ್ತು. ಇದೇ ಜಾಮ್ ಕೇವಲ ಒಂದು ಗಂಟೆ ಭಾರತದಲ್ಲಿ ಆಗಿದ್ದರೆ ಕಾರುಗಳ ಚಿತ್ರ ಬೆಲ್ಲದ ಉಂಡೆಗೆ ಗೊದ್ದ ಮುತ್ತಿಕೊಂಡ ಹಾಗೆ ಕಾಣುತ್ತಿತ್ತು!

–ಜಿ.ಮೃತ್ಯುಂಜಯ, ಬೆಂಗಳೂರು

### ಮೈ ಜುಂ ಎನ್ನುತ್ತದೆ!

ಅಬ್ಬಾ, ಬರೀ 20–30 ನಿಮಿಷಗಳ ಕಾಲ ಟ್ರಾಫಿಕ್ ಜಾಮ್ ಆದರೂ ಸಹಿಸಲು ಸಾಧ್ಯವಿಲ್ಲ. ಅಂಥದರಲ್ಲಿ 10 ದಿನ! ನೆನೆಸಿಕೊಂಡರೆ ಮೈ ಜುಂ ಎನ್ನುತ್ತದೆ.

–ನಿತ್ಯ ಎಸ್. ಮೂಡಬಿದಿರೆ

### ಮೈಸೂರು ಅರಮನೆ ನೆನಪಾಯಿತು

'ಗ್ವಾಲಿಯರ್‌ನಲ್ಲಿ ಒಂದು ಸುತ್ತು' ಶಾರದಾ ಎನ್.ಎಸ್. ಅವರ ಪ್ರವಾಸ ಲೇಖನದಲ್ಲಿ ಇತಿಹಾಸ ಪ್ರಸಿದ್ಧ ಗ್ವಾಲಿಯರ್‌ನ ಮಾಹಿತಿ ವಿವರವಾಗಿತ್ತು. ವಸ್ತು ಸಂಗ್ರಹಾಲಯವಾಗಿರುವ ಅರಮನೆ ವಿಷಯ ಓದುತ್ತಿದ್ದಂತೆ ಮೈಸೂರು ಅರಮನೆ ನೆನಪಾಯಿತು.

–ಎಸ್. ಚನ್ನಪ್ಪ, ಮೈಸೂರು

(ಈ ಪ್ರವಾಸ ಲೇಖನ ಓದಿ ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ, ಕೆ.ಟಿ. ಭಾಸ್ಕರ, ಅರಕಲಗೂಡು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು ಅವರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. –ಸಂ)

### ಮಾಹಿತಿ ತಪ್ಪಾಗಿದೆ

ಗ್ವಾಲಿಯರ್‌ನಲ್ಲಿ ಒಂದು ಸುತ್ತು ಲೇಖನದಲ್ಲಿ ಹೈದರಾಬಾದ್‌ನಲ್ಲಿರುವ ಮ್ಯೂಸಿಯಂ ಹೆಸರು ಸಫ್ದರ್ ಜಂಗ್ ಎಂದಿದೆ. ಅದು ಸಲಾರ್ ಜಂಗ್ ಮ್ಯೂಸಿಯಂ ಎಂದಾಗಬೇಕಿತ್ತು. ಸಫ್ದರ್ ಜಂಗ್ ದೆಹಲಿಯಲ್ಲಿರುವ ಒಂದು ಬಡಾವಣೆಯ ಹೆಸರು.

–ಎಚ್. ಗುಂಡೂರಾವ್, ಬೆಂಗಳೂರು

### ಬೇಂದ್ರೆ ಗ್ರಂಥ ಬಹುಮಾನಕ್ಕೆ ಆಹ್ವಾನ

ಧಾರವಾಡದ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ 'ಬೇಂದ್ರೆ ಗ್ರಂಥ ಬಹುಮಾನ'ಕ್ಕೆ ಪುಸ್ತಕಗಳನ್ನು ಆಹ್ವಾನಿಸಲಾಗಿದೆ. 40 ವರ್ಷದೊಳಗಿನವರು 2013ರಲ್ಲಿ ರಚಿಸಿದ ಕಾವ್ಯ, ಕಥೆ, ನಾಟಕ, ಕಾದಂಬರಿ, ಜೀವನಚರಿತ್ರೆ, ವಿಮರ್ಶೆ, ಲಲಿತ ಪ್ರಬಂಧ ಮತ್ತು ಅನುವಾದ ಪುಸ್ತಕಗಳನ್ನು ಮೂರು ಪ್ರತಿಗಳೊಂದಿಗೆ ಸೆಪ್ಟೆಂಬರ್ 15ರೊಳಗೆ ಕಳಿಸಬೇಕು. ವಿಳಾಸ: ಅಧ್ಯಕ್ಷರು, ಬೇಂದ್ರೆ ಗ್ರಂಥ ಬಹುಮಾನ ಸಮಿತಿ, ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಬೇಂದ್ರೆ ಭವನ, ಸಾಧನಕೇರಿ, ಧಾರವಾಡ 580008, ದೂರವಾಣಿ–0836–2435327

### ಜನ್ನಾ ಸನದಿ ಸಾಹಿತ್ಯ ಪ್ರಶಸ್ತಿಗೆ ಆಹ್ವಾನ

ಬೆಳಗಾವಿಯ ಬಿ.ಎ. ಸನದಿ ಸಾಂಸ್ಕೃತಿಕ ಪ್ರತಿಷ್ಠಾನವು ಪ್ರತಿವರ್ಷ ನೀಡುವ ರಾಜ್ಯಮಟ್ಟದ ಜನ್ನಾ ಸನದಿ ಸಾಹಿತ್ಯ ಪ್ರಶಸ್ತಿಗೆ ಸ್ವತಂತ್ರ ಕೃತಿ ಕಾದಂಬರಿಗಳನ್ನು ಆಹ್ವಾನಿಸಿದೆ. 35 ವರ್ಷದೊಳಗಿನವರು 3 ಪ್ರತಿ ಪುಸ್ತಕ ಕಳಿಸಬೇಕು.
ವಿಳಾಸ: ಮೋಹನ ಕಳಸದ 'ಶ್ರಮಶ್ರೀ' 25, ಶಿಕ್ಷಕರ ಬಡಾವಣೆ ಖಾಸಬಾಗ ಬೆಳಗಾವಿ (9845921947) ಕೊನೆಯ ದಿನ ಆಗಸ್ಟ್ 30.

### ದತ್ತಿ ಪ್ರಶಸ್ತಿಗೆ ಆಹ್ವಾನ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಗಾಂಧಿ ಹಾಗೂ ವಿನೋಬಾ ಭಾವೆ ಸಾಧನೆ ಕುರಿತು ಪ್ರಕಟವಾದ ಸಾಹಿತ್ಯ ಕೃತಿಗಳಿಗೆ ಜಯಶ್ರೀ ಟ್ರಸ್ಟ್ ದತ್ತಿ ಪ್ರಶಸ್ತಿ ಪುರಸ್ಕಾರಕ್ಕೆ ಕೃತಿಗಳನ್ನು ಆಹ್ವಾನಿಸಿದೆ. ಪ್ರತಿಗಳನ್ನು ಕಳಿಸಲು ಕೊನೆಯ ದಿನ ಆಗಸ್ಟ್ 30.
ವಿಳಾಸ: ಕರ್ನಾಟಕ ಗಾಂಧೀ ಸ್ಮಾರಕ, ಗಾಂಧೀ ಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು. ದೂರವಾಣಿ: 080–22261967, 22373256.